# National
# Kannada
# 18.10.2026 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ನಾಡಿನಾದ್ಯಂತ ಶ್ರದ್ಧಾ ಭಕ್ತಿಯಿಂದ ದುರ್ಗಾಷ್ಟಮಿ ಆಚರಣೆ; ವಿವಿಧ ರೂಪಗಳಲ್ಲಿ ಮಾತೆಯ ಆರಾಧನೆ
2. ಪಶ್ಚಿಮ ಬಂಗಾಳದ ಕಾಲ್ತುಳಿತ ದುರಂತ: ಏಳು ಆರೋಪಿಗಳು 10 ದಿನ ಪೊಲೀಸ್ ವಶಕ್ಕೆ
3. ಮೈಸೂರು ದಸರಾ ಸಂಭ್ರಮ; ಇಂದು ಶ್ವಾನ ಪ್ರದರ್ಶನ, ಕಂಬಳ ಆಯೋಜನೆ
4. ಮಲೇಷ್ಯಾ ಸ್ಕ್ವಾಷ್ ಜೂನಿಯರ್ ಓಪನ್ ಟೂರ್ನಿ; ಭಾರತದ ಲೋಕೇಶ್ ಸುಬ್ರಮಣಿಗೆ ಪ್ರಶಸ್ತಿ
5. ಜಪಾನ್‌ನಲ್ಲಿ ಏಷ್ಯನ್ ಪ್ಯಾರಾ ಗೇಮ್ಸ್‌ಗೆ ವರ್ಣರಂಜಿತ ಚಾಲನೆ

---

ನವರಾತ್ರಿಯ ಸಂದರ್ಭದಲ್ಲಿ ಇಂದು ನಾಡಿನ ವಿವಿಧೆಡೆ ದುರ್ಗಾಷ್ಟಮಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ನಾಳೆಯೂ ಕೆಲವೆಡೆ ದುರ್ಗಾ ಪೂಜೆ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.
ಶಕ್ತಿ ದೇವತೆ, ಮಹಿಶಾಸುರ ಮರ್ದಿನಿ ದುರ್ಗೆಯನ್ನು ಅಷ್ಟಮಿಯಂದು ಪೂಜಿಸಿದರೆ, ನಕಾರಾತ್ಮಕ ಶಕ್ತಿ ದೂರಾಗುತ್ತದೆ ಎಂಬ ನಂಬಿಕೆ ಇದೆ. ಇಂದು ದೇವಿಯನ್ನು ಮಹಾ ಗೌರಿಯಾಗಿಯೂ ಪೂಜಿಸಲಾಗುತ್ತಿದೆ.
ದುರ್ಗಾ ದೇವಿಯನ್ನು ವಿವಿಧ ರೂಪಗಳಲ್ಲಿ ಆರಾಧಿಸಲಾಗುತ್ತಿದ್ದು, ಇಂದು ವಿಶೇಷ ಅಲಂಕಾರ ಮತ್ತು ಪೂಜಾ ಕೈಂಕರ್ಯಗಳೊಂದಿಗೆ ದೇವಿಯನ್ನು ಪ್ರಾರ್ಥಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದುರ್ಗಾ ಪೆಂಡಾಲ್‌ಗಳಿಗೆ ಭೇಟಿ ನೀಡಿ ದರ್ಶನ ಪಡೆಯುತ್ತಿದ್ದಾರೆ.
ಅಸ್ಸಾಂನ ಬರಾಕ್ ಕಣಿವೆಯ ವಿವಿಧ ಪ್ರದೇಶಗಳಲ್ಲಿ ಪೂಜಾ ಮಂಟಪಗಳು ವಿದ್ಯುತ್ ದೀಪಾಲಂಕಾರ ಮತ್ತು ಆಕರ್ಷಕ ವಿನ್ಯಾಸಗಳಿಂದ ಕಂಗೊಳಿಸುತ್ತಿವೆ. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಜನರು ಒಗ್ಗೂಡಿ ಉತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಧಾರ್ಮಿಕ ಸೌಹಾರ್ದ ಹಾಗೂ ಸಾಂಸ್ಕೃತಿಕ ಏಕತೆಗೆ ಸಾಕ್ಷಿಯಾಗಿದ್ದಾರೆ. ಬಂಗಾಳಿ ಸಂಸ್ಕೃತಿ, ಕಲಾ ವೈಭವ ಹಾಗೂ ಭಾಷಾ ಪರಂಪರೆಯನ್ನು ಪ್ರತಿಬಿಂಬಿಸುವ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

---

ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿರುವ ಚೋರ್‌ಬಾಗನ್ ದುರ್ಗಾ ಪೂಜಾ ಮಂಟಪದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಮಂದಿಯನ್ನು ಬಂಧಿಸಲಾಗಿದ್ದು, ಇವರನ್ನು ಸ್ಥಳೀಯ ನ್ಯಾಯಾಲಯ ಇಂದು 10 ದಿನಗಳ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ನಿನ್ನೆ ಸಂಜೆ ಮಳೆಯ ನಡುವೆ ಭಕ್ತರ ಸಂಖ್ಯೆ ಹೆಚ್ಚಾಗಿ ನೂಕುನುಗ್ಗಲು ಉಂಟಾದ ಪರಿಣಾಮ ಕಾಲ್ತುಳಿತ ಸಂಭವಿಸಿತ್ತು. ಘಟನೆಯಲ್ಲಿ 19 ಮಂದಿ ಮೃತಪಟ್ಟಿದ್ದು, 25 ಜನರು ಗಾಯಗೊಂಡಿದ್ದಾರೆ.

ಬಂಧಿತರ ಪೈಕಿ ದುರ್ಗಾ ಪೂಜಾ ಸಮಿತಿಯ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರು ಹಾಗೂ ಖಾಸಗಿ ಭದ್ರತಾ ಸಂಸ್ಥೆಯ ಇಬ್ಬರು ಉದ್ಯೋಗಿಗಳು ಸೇರಿದ್ದು, ಕೊಲೆ ಉದ್ದೇಶವಿಲ್ಲದ ನರಹತ್ಯೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ.

ಇದಕ್ಕೂ ಮುನ್ನ, ರಾಜ್ಯಾದ್ಯಂತ ದುರ್ಗಾಪೂಜಾ ಪೆಂಡಾಲ್ ಗಳಲ್ಲಿ ಸುರಕ್ಷತಾ ಸಿದ್ಧತೆ ಪರಾಮರ್ಶೆಗೆ ಉನ್ನತ ಮಟ್ಟದ ಸಮಿತಿ ರಚನೆ ಬಗ್ಗೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಘೋಷಿಸಿದ್ದರು.

ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ 25 ಲಕ್ಷ ರೂಪಾಯಿ ಪರಿಹಾರ ಹಾಗೂ ಒಬ್ಬರಿಗೆ ಉದ್ಯೋಗ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. ಕೇಂದ್ರ ಸರ್ಕಾರ ಕೂಡ ಮೃತರ ಕುಟುಂಬದವರಿಗೆ ತಲಾ 2 ಲಕ್ಷ ರೂಪಾಯಿ ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂಪಾಯಿ ಪರಿಹಾರ ಘೋಷಿಸಿದೆ.

ಘಟನೆ ಸಂಬಂಧ ವಿಶೇಷ ಕಾರ್ಯಪಡೆಯಿಂದ ತನಿಖೆ ಪ್ರಗತಿಯಲ್ಲಿದೆ.

---

ಸೇವನೆಗೆ ಸಿದ್ಧ ಹಾಲಿನ ಉತ್ಪನ್ನಗಳ ಲೇಬಲಿಂಗ್ ಮತ್ತು ಜಾಹೀರಾತುಗಳಲ್ಲಿ ತಪ್ಪು ಮಾಹಿತಿ ನೀಡಿರುವ ಆರೋಪದ ಹಿನ್ನೆಲೆಯಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ-ಎಫ್‌ಎಸ್‌ಎಸ್‌ಎಐ ಪ್ರಮುಖ ತಯಾರಿಕಾ ಕಂಪನಿಗಳಿಗೆ ನೋಟಿಸ್ ನೀಡಿದೆ.

ಉತ್ಪನ್ನಗಳ ಪ್ಯಾಕಿಂಗ್ ಮತ್ತು ಆನ್‌ಲೈನ್ ಜಾಹೀರಾತುಗಳಲ್ಲಿ ವ್ಯತ್ಯಾಸಗಳಿದ್ದು, ಕಾಫಿ ಸುವಾಸನೆಯ ಹಾಲಿನ ಪಾನೀಯಗಳ ಪ್ಯಾಕಿಂಗ್‌ನಲ್ಲಿ ಮುಂಭಾಗದಲ್ಲಿ 'ಸುವಾಸಿತ ಹಾಲು' ಎಂದು ನಮೂದಿಸಲಾಗಿದ್ದು, ಹಿಂಭಾಗದಲ್ಲಿ 'ವಿಶೇಷ ಆಹಾರ ಉತ್ಪನ್ನ' ಎಂದು ನಮೂದಿಸಲಾಗಿದೆ ಎಂದು ಪ್ರಾಧಿಕಾರ ಗಮನಿಸಿದೆ.

ಈ ಉತ್ಪನ್ನಗಳು ಪ್ರಮಾಣೀಕೃತ 'ಸುವಾಸಿತ ಹಾಲು' ವಿಭಾಗಕ್ಕೆ ಸೇರುವುದರಿಂದ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006ರ ಅಡಿಯಲ್ಲಿ ಕ್ರಮ ಕೈಗೊಳ್ಳಬಾರದೇಕೆ ಎಂಬುದಕ್ಕೆ ವಿವರಣೆ ನೀಡುವಂತೆ ಕಂಪನಿಗಳಿಗೆ ಸೂಚಿಸಲಾಗಿದೆ.

ನಿಯಮ ಉಲ್ಲಂಘಿಸುವ ಜಾಹೀರಾತುಗಳ ಪ್ರಸಾರ ಮಾಡದಂತೆ  ಮತ್ತು ಸರಿಯಾದ ಜಾಹೀರಾತು ನೀಡುವಂತೆ ನಿರ್ದೇಶನ ನೀಡುವ ಸಾಧ್ಯತೆಯಿದೆ. ಗ್ರಾಹಕರ ಹಿತಾಸಕ್ತಿ ರಕ್ಷಿಸುವುದು ಈ ಕ್ರಮದ ಉದ್ದೇಶವಾಗಿದೆ.

---

ತಮಿಳುನಾಡಿನ ನಾಗಪಟ್ಟಣಂ ಜಿಲ್ಲೆಯ ಕರಾವಳಿ ಗ್ರಾಮವೊಂದರಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು 137 ಕೆ.ಜಿ. ಕ್ರಿಸ್ಟಲ್ ಮೆಥಾಂಫೆಟಮೈನ್ ಎಂಬ ನಿಷೇಧಿತ ಕೃತಕ ಮಾದಕವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಅಕ್ರಮ ಮಾರುಕಟ್ಟೆಯಲ್ಲಿ ಇದರ ಮೌಲ್ಯ 100 ಕೋಟಿ ರೂಪಾಯಿಗೂ ಅಧಿಕ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಶ್ರೀಲಂಕಾಕ್ಕೆ ಮಾದಕವಸ್ತು ಸಾಗಿಸಲು ಯತ್ನಿಸುತ್ತಿದ್ದ ಶಂಕಿತ ಕರಾವಳಿ ಕಳ್ಳಸಾಗಣೆ ಜಾಲವನ್ನು ಪತ್ತೆಹಚ್ಚಿ, ನಾಲ್ವರನ್ನು ಬಂಧಿಸಲಾಗಿದೆ. ಮಾದಕವಸ್ತು ಮಾರಾಟದಿಂದ ಬಂದಿರಬಹುದೆಂದು ಶಂಕಿಸಲಾದ 10 ಲಕ್ಷ ರೂಪಾಯಿ ನಗದು, ಎರಡು ಕಾರುಗಳು ಹಾಗೂ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

---

ಕರ್ನಾಟಕದಲ್ಲಿ ನಾಡಹಬ್ಬ ಮೈಸೂರು ದಸರಾ ಸಂಭ್ರಮ ಮನೆ ಮಾಡಿದೆ. ದಸರಾ ಅಂಗವಾಗಿ ವೈವಿಧ್ಯಮಯ ಪ್ರದರ್ಶನಗಳು ಏರ್ಪಾಡಾಗಿದ್ದು, ಲಕ್ಷಾಂತರ ಜನರು ವೀಕ್ಷಿಸುತ್ತಿದ್ದಾರೆ.

ದಸರಾ ಮಹೋತ್ಸವದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಆಯೋಜನೆ ಮಾಡಿರುವ ಕರಾವಳಿ ಭಾಗದ ಜನಪ್ರಿಯ ಸಾಂಪ್ರದಾಯಿಕ ಕ್ರೀಡೆ ಕಂಬಳಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಸಂಜೆ ಚಾಲನೆ ನೀಡಲಿದ್ದಾರೆ. ಇಂದು ಬೆಳಗ್ಗೆ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಕಂಬಳ ಕರೆಯನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಂಬಳ ಕರಾವಳಿ ಪ್ರದೇಶದ ಗ್ರಾಮೀಣ ಜನಪ್ರಿಯ ಜಾನಪದ ಕ್ರೀಡೆಯಾಗಿದೆ. ಆ ಭಾಗದ ಕ್ರೀಡೆಯನ್ನು ನಾಡಿನ ಉಳಿದ  ಭಾಗಗಳ ಜನರು ವೀಕ್ಷಿಸಲಿ ಎನ್ನುವ ಕಾರಣಕ್ಕಾಗಿ ಈ ಬಾರಿ ದಸರಾದಲ್ಲಿ ಕಂಬಳ ನಡೆಸಲಾಗುತ್ತಿದೆ. ಕೋಣಗಳ ನಿರ್ವಹಣೆಗೆ ಪೌಷ್ಟಿಕ ಆಹಾರ, ವೈದ್ಯಕೀಯ ಸೇರಿದಂತೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಪುತ್ತೂರು ಶಾಸಕ ಅಶೋಕ್ ರೈ, ಕರಾವಳಿ ಭಾಗದ ಕ್ರೀಡೆಯನ್ನು ಮೈಸೂರಿನಲ್ಲಿ ಆಯೋಜನೆ ಮಾಡಿರುವುದರಿಂದ ಲಕ್ಷಾಂತರ ಜನರು ಇದನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ದಸರಾ ಕಂಬಳ ಉಪಸಮಿತಿ ವತಿಯಿಂದ ಎರಡು ದಿನಗಳ ಕಾಲ ಕಂಬಳದ ವ್ಯವಸ್ಥೆ ಮಾಡಲಾಗಿದೆ.

ರೈತ ದಸರಾ ಉಪಸಮಿತಿ ವತಿಯಿಂದ ಆಯೋಜಿಸಲಾದ ಶ್ವಾನ ಹಾಗೂ ಮುದ್ದಿನ ಪ್ರಾಣಿಗಳ ಪ್ರದರ್ಶನದಲ್ಲಿ ಈ ಬಾರಿ ಸುಮಾರು 800 ವಿವಿಧ ಜಾತಿಯ ನಾಯಿ ಮತ್ತು ಬೆಕ್ಕುಗಳು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪಶುಸಂಗೋಪನೆ ಸಚಿವ ಸಿ.ಪುಟ್ಟರಂಗ ಶೆಟ್ಟಿ, ಶ್ವಾನಗಳು ಮತ್ತು ಮನುಷ್ಯನ ಒಡನಾಟವನ್ನು ಹಂಚಿಕೊಳ್ಳುತ್ತಾ, ಪೊಲೀಸ್ ಇಲಾಖೆಯಲ್ಲಿ ಅವುಗಳ ಕಾರ್ಯಕ್ಷಮತೆ ಶ್ಲಾಘನೀಯ ಎಂದರು.

---

ಪಶ್ಚಿಮಬಂಗಾಳದ ಪರ್ವತಾರೋಹಣ ತಂಡವೊಂದು ಪೂರ್ವ ಲಡಾಖ್‌ನಲ್ಲಿ ಮೂರು ಶಿಖರಗಳನ್ನು ಮೊದಲ ಬಾರಿಗೆ ಏರುವ ಮೂಲಕ ಸಾಧನೆ ಮಾಡಿದೆ. ಅಲ್ಲದೆ, ಹೊಸ ಮಾರ್ಗದ ಮೂಲಕ ಚಾಂಗ್ ಚೆನ್ಮೊ ಕಾಂಗ್ರಿ ಶಿಖರವನ್ನೂ ಏರಿದೆ. ಪರ್ವತಾರೋಹಿಗಳಾದ ತೇನ್ಸಿಂಗ್ ನಾರ್ಗೆ ಮತ್ತು ಎಡ್ಮಂಡ್ ಹಿಲರಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಹೆಸರಿಡುವ ಪ್ರಸ್ತಾವನೆಯನ್ನೂ ತಂಡ ಮುಂದಿಟ್ಟಿದೆ.
ಹಿರಿಯ ಪರ್ವತಾರೋಹಿ ರುದ್ರ ಪ್ರಸಾದ್ ಹಾಲ್ದರ್ ಮತ್ತು ಗಿನ್ನೆಸ್ ವಿಶ್ವ ದಾಖಲೆ ಹೊಂದಿರುವ ಸತ್ಯರೂಪ್ ಸಿದ್ಧಾಂತ ಅವರ ನೇತೃತ್ವದ ಸೋನಾರ್ಪುರ ಆರೋಹಿ ತಂಡವು, ಆಗಸ್ಟ್ 25ರಂದು ಆರಂಭಿಸಿದ 2026ರ ಚಾಂಗ್ ಚೆನ್ಮೊ ಪರ್ವತಾರೋಹಣದಲ್ಲಿ ನಾಲ್ಕು ಆರೋಹಣಗಳನ್ನು ಪೂರ್ಣಗೊಳಿಸಿದೆ.
ಸೆಪ್ಟೆಂಬರ್ 11ರಂದು ತಂಡವು ಹೊಸ ಮಾರ್ಗದ ಮೂಲಕ 6 ಸಾವಿರದ 536 ಮೀಟರ್ ಎತ್ತರದ ಚಾಂಗ್ ಚೆನ್ಮೊ ಕಾಂಗ್ರಿ ಶಿಖರವನ್ನು ಏರಿದೆ. ಇದಲ್ಲದೆ, ಈ ಹಿಂದೆ ಯಾರೂ ಏರದಿದ್ದ 6 ಸಾವಿರ ಮೀಟರ್ ಗೂ ಹೆಚ್ಚಿನ ಎತ್ತರದ ಮೂರು ಶಿಖರಗಳನ್ನು ಮೊದಲ ಬಾರಿಗೆ ಏರುವ ಮೂಲಕ ಸಾಧನೆ ಮಾಡಿದೆ.

---

ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆದ ಮಲೇಷ್ಯಾ ಸ್ಕ್ವಾಷ್ ಜೂನಿಯರ್ ಓಪನ್ ಟೂರ್ನಿಯ ಬಾಲಕರ 17 ವರ್ಷದೊಳಗಿನವರ ವಿಭಾಗದಲ್ಲಿ ಭಾರತದ ಲೋಕೇಶ್ ಸುಬ್ರಮಣಿ ಪ್ರಶಸ್ತಿ ಜಯಿಸಿದ್ದಾರೆ. ಇಂದು ನಡೆದ ಫೈನಲ್ ಪಂದ್ಯದಲ್ಲಿ ಸ್ಥಳೀಯ ಆಟಗಾರ ಮುಹಮ್ಮದ್ ಇಫ್ವಾತ್ ಜುಲ್ಕಿಫ್ಲಿ ಅವರನ್ನು 11-6, 11-2, 11-8 ನೇರ ಗೇಮ್‌ಗಳಿಂದ ಮಣಿಸಿದ್ದಾರೆ.

17 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಆದ್ಯ ಬುಧಿಯಾ ಹಾಗೂ ಬಾಲಕರ ವಿಭಾಗದಲ್ಲಿ ಆರ್ಯಮನ್ ಸಿಂಗ್ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಬಾಲಕಿಯರ 13 ವರ್ಷದೊಳಗಿನವರ ವಿಭಾಗದಲ್ಲಿ ದಿವ್ಯಾಂಶಿ ಜೈನ್, 11 ವರ್ಷದೊಳಗಿನವರ ವಿಭಾಗದಲ್ಲಿ ಅವಿಷಾ ಅಗರ್ವಾಲ್ ಹಾಗೂ ಬಾಲಕರ 19 ವರ್ಷದೊಳಗಿನವರ ವಿಭಾಗದಲ್ಲಿ ಶ್ರವಿನ್ ಜೈನ್ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

---

ಜಪಾನ್‌ನ ಐಚಿ–ನಗೋಯಾದಲ್ಲಿ 2026ರ ಏಷ್ಯನ್ ಪ್ಯಾರಾ ಕ್ರೀಡಾಕೂಟದ ವರ್ಣರಂಜಿತ ಉದ್ಘಾಟನಾ ಸಮಾರಂಭದೊಂದಿಗೆ ಇಂದು ಕ್ರೀಡಾಕೂಟಕ್ಕೆ ವಿಧ್ಯುಕ್ತ ಚಾಲನೆ ದೊರೆತಿದೆ. ಜಪಾನ್ ಪ್ರಧಾನಿ ಸನೇ ತಕೈಚಿ ಅವರು ಏಷ್ಯಾದ ವಿವಿಧ ದೇಶಗಳಿಂದ ಆಗಮಿಸಿರುವ ಕ್ರೀಡಾಪಟುಗಳು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು. 45 ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಗಳನ್ನು ಪ್ರತಿನಿಧಿಸುವ ಸುಮಾರು 3 ಸಾವಿರ ಕ್ರೀಡಾಪಟುಗಳು ಪಾಲ್ಗೊಳ್ಳುತ್ತಿರುವ ಐದನೇ ಆವೃತ್ತಿಯ ಈ ಕ್ರೀಡಾಕೂಟ ಇದೇ 24ರವರೆಗೆ ನಡೆಯಲಿದೆ.

ಮುಕ್ತಾಯ